10	ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರ, ಕುಣಿಕೇನಹಳ್ಳಿ, ತುಮಕೂರು ಜಿಲ್ಲೆ	6 87	8 08	5 44
11	ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರ ಅಜ್ಜಂಪುರ ಚಿಕ್ಕಮಗಳೂರು ಜಿಲ್ಲೆ ಮತ್ತು ಉಪಕೇಂದ್ರಗಳು (ಬೀರೂರು, ಲಿಂಗದಹಳ್ಳಿ ಬಾಸೂರು, ಚಿಕ್ಕಮಗಳೂರು, ಕ್ಯೆನೋಡು ಹಾಗೂ ಹಬ್ಬನಘಟ್ಟ)	5 92	3 32	4 5
	ಒಟ್ಟು	**129 58**	**166 71**	**106.253**

576(700) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2004–05, 2005–06 ಮತ್ತು 2006–07ರಲ್ಲಿ ಪಶುಪಾಲನಾ ಇಲಾಖೆಗೆ ಔಷಧಿ ಖರೀದಿಸಲು ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ಒದಗಿಸಲಾದ ಅನುದಾನವೆಷ್ಟು?

ಆ) ಈ ಮೇಲಿನ ವರ್ಷಗಳಲ್ಲಿ ಔಷಧಿಯನ್ನು ಖರೀದಿಸಲು ಅನುಸರಿಸಲಾದ ಮಾನದಂಡವೇನು?

ಇ) ಔಷಧಿ ಖರೀದಿಯ ನಂತರ ಯಾವ ರೀತಿ ವಿತರಣೆ ಮಾಡಲಾಗಿದೆ ಹಾಗೂ ಇದರ ಸದ್ಬಳಕೆಗೆ ಇಲಾಖೆಯು ತೆಗೆದುಕೊಂಡ ಕ್ರಮವೇನು?

ಈ) ಪ್ರತಿ ಜಿಲ್ಲಾ ಪಶು ಚಿಕಿತ್ಸಾ ಕೇಂದ್ರಗಳಿಗೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಬೇಡಿಕೆಗೆ ಅನುಗುಣವಾಗಿ ಔಷಧಿಗಳನ್ನು ಒದಗಿಸಲಾಗುತ್ತಿದೆಯೇ?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ರಾಜ್ಯವಲಯ ಹಾಗೂ ಜಿಲ್ಲಾ ವಲಯದಲ್ಲಿ ಕಳೆದ 3 ವರ್ಷಗಳಲ್ಲಿ ರೂ 4312 26 ಲಕ್ಷಗಳ ಅನುದಾನ ಔಷಧಿ ಖರೀದಿಗಾಗಿ ಒದಗಿಸಲಾಗಿದೆ ವಿವರ ಈ ಕೆಳಗೆ ನೀಡಿದೆ

2004–05	2005–06	2006–07
1006–10	1618–41	1687–75

ಆ) ಮೇಲಿನ ಔಷಧಿಗಳನ್ನು ಖರೀದಿಸಲು ಕೆಟಿಪಿಪಿ ನಿಯಮಾವಳಿ ಪ್ರಕಾರ 2004–05ನೇ ಸಾಲಿನ ಟೆಂಡರ್ ಮುಖಾಂತರ ದರಗುತ್ತಿಗೆ ಮೇಲೆ ಲಭ್ಯವಿರುವ ಅನುದಾನದ ಹಾಗೂ ಅವಶ್ಯಕತೆ ಗಮನದಲ್ಲಿರಿಸಿ ಖರೀದಿಸುವ ಕ್ರಮ ವಹಿಸಲಾಗಿದೆ

ಇ) ಈ ಔಷಧಿ ಖರೀದಿಯ ನಂತರ ಜಾನುವಾರುಗಳ ಸಂಖ್ಯೆಗಳಿಗನುಗುಣವಾಗಿ ಎಲ್ಲಾ ಜಿಲ್ಲೆಗಳಿಗೆ ವಿತರಣೆ ಮಾಡಲು ಕ್ರಮವಹಿಸಲಾಗಿದೆ ಜಿಲ್ಲಾ ಉಪ ನಿರ್ದೇಶಕರು ಜಿಲ್ಲೆಯಲ್ಲಿ 4 3 2ರ ಅನುಪಾತದಲ್ಲಿ ವಿತರಿಸಿದೆ ಅಂದರೆ ಪಶು ಆಸ್ಪತ್ರೆಗಳಿಗೆ 4 ಭಾಗ, ಪಶು ಚಿಕಿತ್ಸಾಲಯಗಳಿಗೆ 3 ಭಾಗ, ಹಾಗೂ ಪ್ರಾಥಮಿಕ ಮತ್ತು ಚಿಕಿತ್ಸಾ ಕೇಂದ್ರ ಮತ್ತು ಗರ್ಭದಾರಣಾ ಕೇಂದ್ರಗಳಿಗೆ 2 ಭಾಗದಂತೆ ಸರಕು ಪಟ್ಟಿ ಮುಖಾಂತರ ವಿತರಣೆ ಮಾಡಲು ಕ್ರಮ ಜರುಗಿಸಿರುತ್ತಾರೆ ವಿತರಣೆ ನಂತರ ಜಿಲ್ಲಾ ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಹಾಗೂ ಪಶುವೈದ್ಯಾಧಿಕಾರಿಗಳು ತಮ್ಮ ಅಧೀನ ಸಂಸ್ಥೆಗಳ ತಾಂತ್ರಿಕ ತಪಾಸಣೆ ಮಾಡಿ ಸದ್ಬಳಕೆ ಬಗ್ಗೆ ಪ್ರತಿ ಮಾಹೆ ವರದಿ ತರಿಸಿಕೊಳ್ಳುವ ಮುಖಾಂತರ ಖಾತರಿಪಡಿಸಿಕೊಳ್ಳಲಾಗುತ್ತಿದೆ ಹಾಗೂ ಈ ಬಗ್ಗೆ ಕೆ ಡಿ ಪಿ ಪ್ರಗತಿಯಲ್ಲಿ ತಾಂತ್ರಿಕ ತಪಾಸಣೆಗಾಗಿ ಗುರಿ ನಿಗಧಿಪಡಿಸಿ ತೀವ್ರ ನಿಗಾವಹಿಸಿದೆ

ಈ) ಇಲ್ಲ, ಪ್ರತಿ ಪಶು ಆಸ್ಪತ್ರೆಗಳಿಗೆ, ಪಶು ಚಿಕಿತ್ಸಾಲಯಗಳಿಗೆ ಬೇಡಿಕೆಗೆ ಅನುಗುಣವಾಗಿ ಔಷಧಿಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ, ಶೇ 25 ರಿಂದ 30ರಷ್ಟು ಬೇಡಿಕೆ ಮಾತ್ರ ಪೂರೈಸಲಾಗುತ್ತಿದೆ

577(701) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಕುರಿ, ಕುಕ್ಕುಟ, ಹಂದಿ ಹಾಗೂ ಜಾನುವಾರುಗಳ ಅಭಿವೃದ್ಧಿಗಾಗಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು? ?

ಆ) ಇವುಗಳಿಗಾಗಿ ಸರ್ಕಾರವು 2006–07ನೇ ಸಾಲಿನಲ್ಲಿ ಒದಗಿಸಲಾದ ಅನುದಾನವೆಷ್ಟು?

ಇ) ಡಿಸೆಂಬರ್ 2007ರವರೆಗೆ ಜಾನುವಾರುಗಳ ಅಭಿವೃದ್ಧಿಗಾಗಿ ವಿನಿಯೋಗಿಸಲಾದ ಅನುದಾನವೆಷ್ಟು? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)